ನಿಯಂತ್ರಿಸುವ ಕೆಲಸವನ್ನು ಸರ್ಕಾರ ನೀತಿ ನಿಯಮಗಳ ಮೂಲಕ ಮಾಡಬೇಕಾಗುತ್ತದೆ.

ಈ ವಾದವನ್ನು ಬೆಳೆಸಲು ಒಂದು ಸಣ್ಣ ಉದಾಹರಣೆಯನ್ನು ತೆಗೆದುಕೊಳ್ಳೋಣ. ಮುಕ್ತ ಮಾರುಕಟ್ಟೆಯ ಪ್ರತಿಪಾದಕರು ಅದರಿಂದಾಗಿ ಆರ್ಥಿಕ ಬೆಳವಣಿಗೆ ಉಂಟಾಗುತ್ತದೆಂದೂ, ಆ ಆರ್ಥಿಕ ಬೆಳವಣಿಗೆಯಿಂದಾಗಿ ಉಕ್ಕುವ ಆರ್ಥಿಕ ಸಂಪನ್ಮೂಲಗಳು ಹೆಚ್ಚಿನ ಅವಕಾಶಗಳನ್ನು ಉಂಟು ಮಾಡುತ್ತವೆ ಹಾಗೂ ಹೆಚ್ಚಿನ ವ್ಯವಹಾರದಿಂದ ವಸೂಲಿ ಮಾಡುವ ತೆರಿಗೆಯಿಂದಾಗಿ ಮರುವಿತರಣೆಗೆ ಆರ್ಥಿಕ ಸಂಪನ್ಮೂಲಗಳೂ ಸರ್ಕಾರಕ್ಕೆ ಸಲ್ಲುತ್ತವೆಂದು ವಾದಿಸುತ್ತಾರೆ. ಆದರೆ, ಕಾರ್ಮಿಕ ಕಲ್ಯಾಣವನ್ನು ಪ್ರೋತ್ಸಾಹಿಸುವ ಗಟ್ಟಿ ಕಾನೂನು, ನಿಯಮಾವಳಿಗಳು ನೌಕರರ ಕ್ಷೇಮಾಭಿವೃದ್ಧಿಯನ್ನು ಹೆಚ್ಚಿಸುತ್ತವೆ. ನೌಕರರನ್ನು ಶೋಷಿಸುವುದನ್ನು ತಡೆಯುವ ನಿಯಮಾವಳಿಯ ಫಲವಾಗಿ ಅವರಿಗೆ ಹೆಚ್ಚು ವೇತನ ಕೊಡುವುದರಿಂದ ಸಂಸ್ಥೆಯ ಲಾಭಾಂಶ ತುಸು ಮಟ್ಟಿಗೆ ಕಮ್ಮಿಯಾಗಬಹುದು. ಆದರೆ, ಅದೇ ಕಾಲಕ್ಕೆ ಸರ್ಕಾರ ಕಾರ್ಮಿಕರಿಗಾಗಿ ತನ್ನ ಬೊಕ್ಕಸದಿಂದ ಕೊಡಮಾಡಬೇಕಾದ ಮರುವಿತರಣಾ ಮೊಬಲಗೂ ಕಮ್ಮಿಯಾಗುತ್ತದೆ. ಸಂಕ್ಷೇಮವಾದಿ ಸರ್ಕಾರಗಳು ಸಂಸ್ಥೆಯ ನಿರ್ವಹಣೆಯ ಆಂತರ್ಯದಲ್ಲಿ ತುಸು ಮಟ್ಟಿಗೆ ಲಾಭ ಕಮ್ಮಿ ಮಾಡಿ, ವೇತನ ಹೆಚ್ಚಿಸುವ ಮೂಲಕ ಮರುವಿತರಣೆ ಮಾಡುವುದರಿಂದ, ಎಲ್ಲರಿಗೂ ಸಮಾನ ಮಟ್ಟದಲ್ಲಿ ಉತ್ತಮ ವ್ಯವಹಾರಕ್ಕೆ ಚೌಕಟ್ಟು ದಕ್ಕಬಹುದು. ಹೀಗಾಗಿಯೇ, ಮುಕ್ತ ಮಾರುಕಟ್ಟೆಯ ಮಾತನ್ನಾಡಿದಾಗ ಸರ್ಕಾರದ ಪಾತ್ರ ಇನ್ನೂ ಅಧಿಕ ಮಟ್ಟದಲ್ಲಿರುತ್ತದೆಯೇ ಹೊರತು ಕಮ್ಮಿಯಾಗುವ ಪ್ರಮೇಯವಿಲ್ಲ. 2008ರ ವಿಶ್ವ ಆರ್ಥಿಕ ಬಿಕ್ಕಟ್ಟಿನಲ್ಲಿ ಲಾಭವೆಲ್ಲಾ ಖಾಸಗಿ ಮೂಲಗಳಿಗೆ ಹೋಗಿ ನಷ್ಟದ ಭಾರವನ್ನು ಸಮಾಜದ ಮೇಲೆ (ಸರ್ಕಾರದಿಂದ ಆರ್ಥಿಕ ಸಹಾಯ ಪಡೆದ ದೊಡ್ಡ ಕಾರ್ಪೊರೇಷನ್‌ಗಳ ಮೂಲಕ) ಹೇರಲಾಯಿತು ಎನ್ನುವುದನ್ನು ಸ್ಟಿಗ್ಲಿಟ್ಸ್ ನಿರೂಪಿಸುತ್ತಾರೆ. ಎಷ್ಟಾದರೂ ದೊಡ್ಡ ಸಂಸ್ಥೆಗಳಿಗೆ ಕೊಟ್ಟ ಸರ್ಕಾರದ ಸಹಾಯ ಬಡ ತೆರಿಗೆದಾರರ ದುಡ್ಡೇ ಆಗಿತ್ತಲ್ಲವೇ?

ಎಲ್ಲ ಆರ್ಥಿಕ ವಾದ-ಪ್ರತಿವಾದಗಳ ಅಡಿಯಲ್ಲಿ ಒಂದು ನೈತಿಕ ನಿಲುವೂ ಇರಬೇಕೆಂದು ಸ್ಟಿಗ್ಲಿಟ್ಸ್ ಪ್ರತಿಪಾದಿಸುತ್ತಾರೆ.ಮಾನವಸಂಕುಲವುಸ್ವಾರ್ಥ,ಸ್ವಹಿತ, ತರ್ಕಬದ್ಧ ವಿಚಾರದಿಂದಲೇ ಎಲ್ಲ ನಿರ್ಣಯಗಳನ್ನು ಕೈಗೊಳ್ಳುತ್ತದೆಂದು ಅರ್ಥಶಾಸ್ತ್ರ ವಾದಿಸಿದರೂ, ವಾಸ್ತವ ಅದಕ್ಕಿಂತ ಭಿನ್ನವಾಗಿದೆ. ಕುಟುಂಬದಲ್ಲಿನ ವ್ಯವಹಾರ, ಸಮುದಾಯದ ವ್ಯವಹಾರಗಳನ್ನು ನಾವು ನೋಡಿದಾಗ ಅಲ್ಲಿ ಸಂಕ್ಷೇಮ, ಸಾಮಾಜಿಕ ಒಳಿತಿನ ವ್ಯವಹಾರಗಳನ್ನು ಕಾಣುತ್ತೇವೆ. ಮನೆಯಲ್ಲಿ ಮಾನಸಿಕವಾಗಿ ಬೆಳೆಯದ ಒಂದು ಮಗುವಿದ್ದರೆ, ಅದನ್ನು ಪ್ರೀತಿಯಿಂದ ನೋಡಿಕೊಳ್ಳುವುದು ಮಾನವ ಸಹಜ ಪ್ರವೃತ್ತಿ. ಅದು ಅರ್ಥವ್ಯವಸ್ಥೆಯ ತರ್ಕಬದ್ಧತೆಯ ಜಾಯಮಾನಕ್ಕೆ ಒಗ್ಗಿದ್ದಲ್ಲ. ಅಲ್ಲಿ ಒಂದು ನೈತಿಕ ಪ್ರಶ್ನೆಯಿದೆ. ಅಸೀಮ ಸಂಪತ್ತನ್ನು ಸಂಪಾದಿಸಿ ಅದರಲ್ಲಿ ಒಂದು ಭಾಗವನ್ನು ಮರುವಿತರಣೆ ಮಾಡುವ ಬಿಲ್ ಗೇಟ್ಸ್, ನಿಲೇಕಣಿ, ಪ್ರೇಮ್‌ಜೀಗಳಂತಹ ಆಧುನಿಕ ಫಿಲಾನ್ತ್ರಪಿಸ್ಟುಗಳಿಗೆ ಅಸೀಮ ಸ್ವಾತಂತ್ರ್ಯವನ್ನು ಸರ್ಕಾರ ಕೊಡಬೇಕೇ ಅಥವಾ ಆ ಸ್ವಾತಂತ್ರ್ಯವನ್ನು ಸೀಮಿತಗೊಳಿಸಿ ಅವರುಗಳ ಉದ್ಯೋಗಿಗಳಿಗೆ ಮತ್ತು ಇತರ ಸೇವೆಗಳನ್ನು ಒದಗಿಸುವವರಿಗೆ ಹೆಚ್ಚಿನ ಸವಲತ್ತು-ಸಂಪತ್ತುಗಳನ್ನು ಕೊಡುವ ಸಮಾನತೆಯ ಅ-ಸ್ವಾತಂತ್ರ್ಯದ ಕಡಿವಾಣವನ್ನು ಕಾನೂನು ನಿಯಮಗಳ ಮೂಲಕ ಹೇರಬೇಕೇ ಎನ್ನುವುದೇ ಪ್ರಶ್ನೆ. ವ್ಯಕ್ತಿ ಅಥವಾ ಸೇವೆಗಳನ್ನೊದಗಿಸುವ ಸಣ್ಣ ಸಂಸ್ಥೆಗಳು ಒಳಪಡುವ ಶೋಷಣೆಗೂ, ದೊಡ್ಡ ಸಂಸ್ಥೆಯ ದಕ್ಷತೆಗೂ ಇರುವ ಅಂತರವನ್ನು ಗಮನಿಸಿದಾಗ ವ್ಯಾಪಾರದ ಸ್ವಾತಂತ್ರ್ಯಕ್ಕೆ ಸರ್ಕಾರದ ನಿಯಮಾವಳಿಗಳ ಅ-ಸ್ವಾತಂತ್ರ್ಯದ ಕಡಿವಾಣದ ಅವಶ್ಯಕತೆ ನಮಗೆ ಕಾಣಿಸುತ್ತದೆ.

ನವ ಉದಾರವಾದಿ ಬಂಡವಾಳಶಾಹಿಯನ್ನು ಪರಿಶೀಲಿಸಿದಾಗ, ಅದು ವಿಫಲವಾದುದಕ್ಕೆ ಈ ಶೋಷಣೆಯ ಭಿನ್ನ ನೆಲೆಗಳೇ ಕಾರಣ ಎನ್ನುವುದು ನಮಗೆ ತಿಳಿದುಬರುತ್ತದೆ. ನವ ಉದಾರವಾದಿ ವಿಚಾರಧಾರೆಯು ಜನತೆಯ ಮೂಲಭೂತ ಅವಶ್ಯಕತೆಗಳಾದ ಊಟ, ವಿದ್ಯೆ, ವೈದ್ಯಕೀಯ ಸದುಪಾಯ, ಮತ್ತಿತರ ಸೇವೆಗಳನ್ನು ಒದಗಿಸುವಲ್ಲಿ ಸರ್ಕಾರದ ಪಾತ್ರ ಮತ್ತು ಪಾಲುದಾರಿಕೆಯನ್ನು ಕುಬ್ಜವಾಗಿಸಿ, ಅವುಗಳನ್ನೂ ದಕ್ಷತೆಯ ಹೆಸರಿನಲ್ಲಿ ಮಾರುಕಟ್ಟೆಗಳಿಗೆ ಬಿಟ್ಟುಕೊಡಬೇಕೆನ್ನುವ ವಾದವೇ